# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1373 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಮಧು ಜಿ ಮಾದೇಗೌಡ |
| ಉತ್ತರಿಸುವ ದಿನಾಂಕ | : | 18-12-2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಮುದಾಯ-ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಜಾರಿಗೆ ತಂದ **'ಮನೆ-ಮನೆಗೆ ಪೊಲೀಸ್'** ಕಾಯಕ್ರಮವು ಎಷ್ಟು ಹಂತಗಳಲ್ಲಿ ಜಾರಿಗೆ ಬಂದಿದೆ: ಪ್ರಸ್ತುತ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನವಾಗಿದೆಯೇ? | ಪೊಲೀಸ್ ಪ್ರಧಾನ ಕಛೇರಿ ಸುತ್ತೋಲೆ ಸಂಖ್ಯೆ: ಅಪರಾಧ:3/75/2025 ದಿನಾಂಕ: 04.07.2025 ರಲ್ಲಿ ಸೂಚಿಸಿದಂತೆ ಸಮುದಾಯ-ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ **'ಮನೆ-ಮನೆಗೆ ಪೊಲೀಸ್'** ವ್ಯವಸ್ಥೆಯನ್ನು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಬೀಟ್‌ವಾರು ಮನೆಗಳನ್ನು ವಿಭಾಗಗಳಾಗಿ ಪ್ರತ್ಯೇಕಿಸಿ ಪ್ರತಿ ದಿನ ಭೇಟಿ ನೀಡುವಂತೆ ಸೂಚಿಸಿ ಜಾರಿಗೆ ತರಲಾಗಿದೆ. ರಾಜ್ಯದಲ್ಲಿ **'ಮನೆ-ಮನೆಗೆ ಪೊಲೀಸ್'** ಪರಿಕಲ್ಪನೆಯು ಸಂಪೂರ್ಣ ಯಶಸ್ವಿಯಾಗಿ ಜಾರಿಗೊಂಡಿರುತ್ತದೆ. |
| ಆ | ಈ ಕಾರ್ಯಕ್ರಮದಡಿ ಉದ್ದೇಶ ಏನು: ಜನರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿದೆಯೇ? | **'ಮನೆ-ಮನೆಗೆ ಪೊಲೀಸ್' ಕಾರ್ಯಕ್ರಮದ ಉದ್ದೇಶಗಳು:**<br><br>1. ಮನೆ ಮನೆಗೆ ಪೊಲೀಸ್ ಕಾರ್ಯ ಕ್ರಮದಿಂದ ಪೊಲೀಸರು ಮನೆ ಮನೆಗೆ ತೆರಳಿ ಜನರಲ್ಲಿ ಮನೋಸ್ಥೈರ್ಯವನ್ನು ಹೆಚ್ಚಿಸುವುದಲ್ಲದೇ ಜನರು ನಿರ್ಭೀತಿಯಿಂದ ಪೊಲೀಸರೊಂದಿಗೆ ವ್ಯವಹರಿಸಲು ಅನುಕೂಲವಾಗುತ್ತದೆ. ಇದರಿಂದ ಅಪರಾಧಗಳನ್ನು ತಡೆಗಟ್ಟಲು ಸಾಧ್ಯತೆ ಇರುತ್ತದೆ.<br>2. ಜನರಲ್ಲಿ ಸೈಬರ್ ಅಪರಾಧ, ಸರಕಳ್ಳತನ, ಮನೆಕಳ್ಳತನ, ಸೋಷಿಯಲ್ ಮೀಡಿಯಾದಲ್ಲಿ ನಡೆಯುವ ಮೋಸಗಳ ಬಗ್ಗೆ, ಮಹಿಳೆ ಮತ್ತು ಮಕ್ಕಳ ಅಪರಾಧಗಳ ಬಗ್ಗೆ, ಮಾದಕ ದ್ರವ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.<br>3. ಸಮಾಜದಲ್ಲಿ ನಿರ್ಭಯ ವಾತಾವರಣವನ್ನು ಸೃಜಿಸುವ ಜೊತೆಗೆ ರಕ್ಷಣೆ ಮತ್ತು ಸುರಕ್ಷತೆ ಒದಗಿಸುವ ಕರ್ತವ್ಯ ಮತ್ತು ಗುರುತರ ಜವಾಬ್ದಾರಿಗಳು ಪೊಲೀಸ್ ಇಲಾಖೆಯ ಮೇಲಿವೆ. ಸಾರ್ವಜನಿಕರನ್ನು ಸ್ನೇಹಿಯಾಗಿಸಿಕೊಳ್ಳುವುದರಿಂದ, ಪೊಲೀಸ್ ವ್ಯವಸ್ಥೆಯು ಪೊಲೀಸ್ ಮೂಲಭೂತ ಕರ್ತವ್ಯದ ಪರಿಣಾಮಕತೆಯನ್ನು ಹೆಚ್ಚಿಸಿಕೊಳ್ಳಬಹುದು. |

| | | |
|---|---|---|
| | | 4. ಪೊಲೀಸ್ ಸೇವೆಗಳ ಪ್ರತಿಯೊಂದು ಸ್ತರದಲ್ಲೂ, ಸಾರ್ವಜನಿಕರ ಬೆಂಬಲ ಮತ್ತು ಸಹಭಾಗಿತ್ವವನ್ನು ಸಾಧಿಸಿಕೊಂಡು ಸಾರ್ವಜನಿಕರಿಗೆ ಉತ್ಕೃಷ್ಟ ಸೇವೆಯನ್ನು ಒದಗಿಸುವುದು ಮತ್ತು ಪೊಲೀಸರು ಕೂಡ ಸಮಾಜದ ಸೇವಕರು ಎಂಬುದನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಸುವುದು.<br>5. ಪ್ರಸ್ತುತ ಪೊಲೀಸ್ ವ್ಯವಸ್ಥೆಯು ಬಹುತೇಕವಾಗಿ "ಪ್ರತಿಕ್ರಿಯೆ ಸೇವೆ" ಯನ್ನು ಮಾತ್ರವೇ ಒದಗಿಸುತ್ತಾ ಬಂದಿದೆ. ಅಂದರೆ, ಸಾರ್ವಜನಿಕರು ನೀಡುವ ದೂರುಗಳ / ಅಹವಾಲುಗಳ ಆಧಾರದ ಮೇಲೆ ಮಾತ್ರವೇ ಪ್ರತಿಕ್ರಿಯಿಸಲಾಗುತ್ತಿದೆ. ಆದರೆ ಈ ವ್ಯವಸ್ಥೆಯನ್ನು **"ಸಕ್ರಿಯ ಸೇವೆ" (Pro-active Policing)** ಒದಗಿಸುವ ವ್ಯವಸ್ಥೆಯನ್ನಾಗಿ ಪರಿವರ್ತನೆಗೊಳಿಸಿ ಪೊಲೀಸ್ ಸೇವೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯು ಹೆಚ್ಚುವುದರೊಂದಿಗೆ, ಜನರು ಮತ್ತು ಪೋಲಿಸರ ನಡುವೆ ನಿಕಟ ಸಂಬಂಧ ಏರ್ಪಟ್ಟು, ಪರಿಣಾಮವಾಗಿ, ಸಮಾಜದಲ್ಲಿ ಗಂಭೀರ ಸಮಸ್ಯೆ ಉದ್ಭವಿಸುವ ಮೊದಲೇ ಪರಿಹಾರೋಪಾಯಗಳೊಂದಿಗೆ ಸನ್ನದ್ಧರಾಗಿರುವಂತಹ ವಾತಾವರಣ ರೂಪುಗೊಳ್ಳುತ್ತದೆ.<br>'ಮನೆ-ಮನೆಗೆ ಪೊಲೀಸ್' ಎಂಬ ವಿನೂತನ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರಕಿರುತ್ತದೆ. |
| ಇ | ಈ ಕಾರ್ಯಕ್ರಮದಡಿ ಎಷ್ಟು ಮಂದಿ ಪೊಲೀಸ್‌ರಿಗೆ ತರಬೇತಿ ನೀಡಲಾಗಿದೆ: ಈವರೆಗೂ ಪೊಲೀಸರು ಎಷ್ಟು ಮನೆಗಳಿಗೆ ಭೇಟಿ ನೀಡಿದ್ದಾರೆ: ಪ್ರತಿ ಜಿಲ್ಲೆಗಳಲ್ಲಿರುವ ಬೀಟ್‌ಗಳ ಸಂಖ್ಯೆ ಎಷ್ಟು: ಹಾಗೂ ಈ ಕಾರ್ಯಕ್ರಮ ಜಾರಿ ಬಳಿಕ ಎಷ್ಟು ಅಹವಾಲುಗಳಿಗೆ ಸ್ಪಂದಿಸಲಾಗಿದೆ ಮತ್ತು ಪರಿಹರಿಸಲಾಗಿದೆ: (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಈ ಕಾರ್ಯಕ್ರಮದಡಿ ಪೊಲೀಸ್‌ರಿಗೆ ನೀಡಲಾದ ತರಬೇತಿ, ಈವರೆಗೂ ಪೊಲೀಸರು ಮನೆಗಳಿಗೆ ಭೇಟಿ ನೀಡಲಾದ ಸಂಖ್ಯೆ, ಬೀಟ್‌ಗಳ ಸಂಖ್ಯೆ ಹಾಗೂ ಈ ಕಾರ್ಯಕ್ರಮ ಜಾರಿ ಬಳಿಕ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಲಾಗಿದೆ ಮತ್ತು ಪರಿಹರಿಸಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಅನುಬಂಧ- ಅ ದಲ್ಲಿ ನೀಡಲಾಗಿದೆ. |
| ಈ | ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಲು ಈ ಕಾಯಕ್ರಮ ನೆರವಾಗಿದೆಯೇ: | ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಲು ಈ ಕಾಯಕ್ರಮದಿಂದ ನೆರವಾದ ಅಂಶಗಳು:<br>1. ಮನೆ ಮನೆ ಪೊಲೀಸ್ ಕಾರ್ಯ ಕ್ರಮದಿಂದ ಅಪರಾಧ ಕೃತ್ಯಗಳಲ್ಲಿ ಭಾಗವಹಿಸುವ ಠಾಣಾ ಸರಹದ್ದಿನಲ್ಲಿ ವಾಸಿಸುತ್ತಿರುವ ಆಸಾಮಿಗಳ ವಾಸದ ವಿಳಾಸ ಆತನ |

| | | |
|---|---|---|
| | | ಪ್ರಸ್ತುತ ಕೆಲಸ ಹಾಗೂ ಇನ್ನಿತರೆ ಮಾಹಿತಿ ದೊರಕಲಿದೆ.<br>2. ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಉತ್ತಮ ಭಾಂದವ್ಯ ಏರ್ಪಟ್ಟಿರುತ್ತದೆ.<br>3. ಸಾರ್ವಜನಿಕರು ಮನೆ ಮನೆ ಭೇಟಿ ನೀಡಿರುವುದರಿಂದ ಸಾರ್ವಜನಿಕರಲ್ಲಿ ನಮ್ಮ ರಕ್ಷಣೆಗೆ ಪೊಲೀಸರು ಇದ್ದಾರೆ ಎಂಬ ಧೈರ್ಯ ಭಾವನೆ ಬಂದಿರುತ್ತದೆ.<br>4. ಬೀಟ್ ಪೊಲೀಸರು "ಮನೆಮನೆಗೆ" ಭೇಟಿ ನೀಡಿ, ದೂರುಗಳನ್ನು ಕೇಳುವುದರ ಜೊತೆಗೆ ಸ್ಥಳೀಯ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಸ್ಥಳೀಯ ಜನರಿಗೆ ಕಾನೂನು / ಸುರಕ್ಷತಾ ಜಾಗೃತಿಯನ್ನು ಮೂಡಿಸುವುದು.<br>5. ಜನರಲ್ಲಿ ಸೈಬರ್ ಅಪರಾಧ, ಸರಕಳ್ಳತನ, ಮನೆಕಳ್ಳತನ, ಸೋಷಲ್ ಮೀಡಿಯಾದಲ್ಲಿ ನಡೆಯುವ ಮೋಸಗಳ ಬಗ್ಗೆ, ಮಹಿಳೆ ಮತ್ತು ಮಕ್ಕಳ ಅಪರಾಧಗಳ ಬಗ್ಗೆ, ಮಾದಕ ದ್ರವ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಅಪರಾಧ ತಡೆಗೆ ಸಹಕಾರಿಯಾಗುತ್ತದೆ.<br>6. ಈ ರೀತಿಯ ಕಮ್ಯೂನಿಟಿ ಪೊಲೀಸ್ ಪ್ರಯತ್ನವು ನಗರ ಹಾಗೂ ಎಲ್ಲಾ ಗ್ರಾಮಾಂತರ ಜನರಿಗೆ ಪೊಲೀಸರ ತ್ವರಿತ ಪ್ರತಿಕ್ರಿಯೆ, ಸ್ಥಳೀಯ ಸಾರ್ವಜನಿಕರ ನಂಬಿಕೆ ಕಲ್ಪಿಸುವುದು, ಮತ್ತು ಅಪರಾಧಗಳ ತಡೆಗೆ ಸಹಕಾರಿಯಾಗಿರುತ್ತದೆ.<br>7. ಬೀಟ್ ಸಿಬ್ಬಂದಿಯು ನಿಯೋಜಿಸಿದ ಪ್ರದೇಶದಲ್ಲಿ ಶಾಂತಿ, ಕಾನೂನು, ಭದ್ರತೆ ಹಾಗೂ ಸಾರ್ವಜನಿಕ ಸಂಪರ್ಕವನ್ನು ಹೊಂದಿರುವುದರಿಂದ ಪೊಲೀಸರು ಜನಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ಮಾಹಿತಿಗಳನ್ನು ಹಂಚಿಕೊಳ್ಳಲು ಸಾಧ್ಯವಾಗಿರುವುದಲ್ಲದೇ, ಹೆಚ್ಚಿನ ಅಪರಾಧಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚಲು ಸಹಕಾರಿಯಾಗಿರುತ್ತದೆ.<br>8. ಬೀಟ್ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಅಧಿಕೃತ ಮತ್ತು ಅನಧಿಕೃತ ಚಟುವಟಿಕೆಗಳ ಬಗ್ಗೆ ನಿಗಾವಹಿಸಲು ಸಹಕಾರಿಯಾಗುತ್ತದೆ.<br>9. ಪ್ರತಿ ಮನೆಗೆ ಭೇಟಿ ನೀಡುವುದರಿಂದ ಜನರ ಮನೋಸ್ಥೈರ್ಯವನ್ನು ಹೆಚ್ಚಿಸಲು ಸಹಕಾರಿಯಾಗಿರುತ್ತದೆ. |

**ಹೆಚ್‌ಡಿ 244 ಕೆಎಎ 2025**

**(ಡಾ|| ಜಿ. ಪರಮೇಶ್ವರ)**
ಗೃಹ ಸಚಿವರು

## ಅನುಬಂಧ - ಅ

| ಕ್ರ ಸ | ಘಟಕದ ಹೆಸರು | ಕಾರ್ಯಕ್ರಮದಡಿ ಪೊಲೀಸರಿಗೆ ತರಬೇತಿ ನೀಡಲಾದ ಸಂಖ್ಯೆ | ಈವರೆಗೂ ಪೊಲೀಸರು ಮನೆಗಳಿಗೆ ಭೇಟಿ ನೀಡಿರುವ ಸಂಖ್ಯೆ | ಬೀಟ್‌ಗಳ ಸಂಖ್ಯೆ | ಅಹವಾಲುಗಳಿಗೆ ಸ್ಪಂದಿಸಲಾದ ಸಂಖ್ಯೆ | ಪರಿಹರಿಸಲಾದ ಅಹವಾಲುಗಳ ಸಂಖ್ಯೆ |
|---|---|---|---|---|---|---|
| 1. | ಬೆಂಗಳೂರು ನಗರ | 735 | 2713143 | 864 | 3012 | 2375 |
| 2. | ಮೈಸೂರು ನಗರ | 1899 | 207650 | 758 | 502 | 482 |
| 3. | ಹುಬ್ಬಳ್ಳಿ-ಧಾರವಾಡ | 0 | 213584 | 986 | 88 | 77 |
| 4. | ಮಂಗಳೂರು ನಗರ | 683 | 243532 | 683 | 30 | 30 |
| 5. | ಬೆಳಗಾವಿ ನಗರ | 576 | 156148 | 641 | 116 | 116 |
| 6. | ಕಲಬುರಗಿ ನಗರ | 785 | 123354 | 240 | 11 | 11 |
| 7. | ಬೆಂಗಳೂರು ಜಿಲ್ಲೆ | 813 | 256920 | 262 | 1293 | 1293 |
| 8. | ತುಮಕೂರು | 1569 | 778724 | 551 | 213 | 213 |
| 9. | ಕೋಲಾರ | 510 | 253906 | 163 | 174 | 132 |
| 10. | ರಾಮನಗರ | 772 | 270550 | 237 | 195 | 195 |
| 11. | ಚಿಕ್ಕಬಳ್ಳಾಪುರ | 558 | 318220 | 279 | 67 | 67 |
| 12. | ಕೆ.ಜಿ.ಎಫ್ | 456 | 101032 | 135 | 20 | 20 |
| 13. | ಮೈಸೂರು ಜಿಲ್ಲೆ | 819 | 411967 | 343 | 539 | 433 |
| 14. | ಮಂಡ್ಯ | 779 | 356102 | 291 | 390 | 360 |
| 15. | ಹಾಸನ | 852 | 409139 | 368 | 164 | 155 |
| 16. | ಕೊಡಗು | 517 | 123230 | 230 | 59 | 59 |
| 17. | ಚಾಮರಾಜನಗರ | 825 | 239785 | 226 | 36 | 26 |
| 18. | ಬೆಳಗಾವಿ ಜಿಲ್ಲೆ | 1485 | 864019 | 379 | 269 | 269 |
| 19. | ವಿಜಯಪುರ | 1202 | 568116 | 329 | 352 | 352 |
| 20. | ಧಾರವಾಡ | 375 | 163239 | 115 | 236 | 236 |
| 21. | ಬಾಗಲಕೋಟೆ | 832 | 464927 | 302 | 257 | 257 |
| 22. | ಗದಗ | 644 | 263938 | 200 | 145 | 145 |
| 23. | ಚಿತ್ರದುರ್ಗ | 870 | 364471 | 435 | 429 | 408 |
| 24. | ಹಾವೇರಿ | 670 | 378860 | 241 | 447 | 447 |
| 25. | ಶಿವಮೊಗ್ಗ | 0 | 411644 | 497 | 388 | 376 |
| 26. | ದಾವಣಗೆರೆ | 1096 | 380077 | 296 | 895 | 895 |
| 27. | ದಕ್ಷಿಣ ಕನ್ನಡ | 0 | 271634 | 146 | 142 | 142 |
| 28. | ಉತ್ತರ ಕನ್ನಡ | 1355 | 357944 | 392 | 450 | 245 |
| 29. | ಚಿಕ್ಕಮಗಳೂರು | 876 | 1492880 | 368 | 490 | 456 |
| 30. | ಉಡುಪಿ | 548 | 342709 | 252 | 6 | 5 |
| 31. | ಕಲಬುರಗಿ ಜಿಲ್ಲೆ | 1061 | 308787 | 324 | 36 | 36 |
| 32. | ಬೀದರ | 1328 | 380674 | 362 | 364 | 360 |
| 33. | ಯಾದಗಿರಿ | 505 | 241763 | 162 | 160 | 160 |
| 34. | ಬಳ್ಳಾರಿ | 681 | 284695 | 366 | 183 | 159 |
| 35. | ರಾಯಚೂರು | 976 | 400939 | 280 | 271 | 256 |
| 36. | ಕೊಪ್ಪಳ | 525 | 355361 | 248 | 36 | 31 |
| 37. | ವಿಜಯನಗರ | 946 | 287500 | 246 | 39 | 39 |